(ii) ಪಿ.ಯು.ಸಿ. ಪರೀಕ್ಷೆಯಲ್ಲಿ ನಕಲು ಮಾಡಿಲ್ಲವೆಂದು ಸಾಬೀತಾದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂಡಲು ಅನುಮತಿ

ಶ್ರೀ ಬಾಬುರೆಡ್ಡಿ ವೆಂ ತುಂಗಳ್ (ಬೀಳಗಿ).—ಅಧ್ಯಕ್ಷರೇ, ಕಳೆದ ವರ್ಷದ ಅಕ್ಟೋಬರ್ ತಿಂಗಳಲ್ಲಿ ರಾಜ್ಯದಲೆಲ್ಲಾ ಪಿ. ಯು.ಸಿ. ಪರೀಕ್ಷೆಗಳು ಜರುಗಿದ ಸಂಗತಿ ತಮಗೆ ಗೊತ್ತು. ಈ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಕಲು ಮಾಡುವುದನ್ನು ತಡೆಗಟ್ಟಲು ವಿದ್ಯಾ ಇಲಾಖೆ ವಿಚಕ್ಷಣ ದಳಗಳನ್ನು ನಿಯಮಿಸಿದ್ದು ಅವು ಪರಿಣಾಮಕಾರಿಯಾಗಿ ಕಾರ್ಯ ಮಾಡಿದ್ದು ಅತ್ಯಂತ ಸ್ತುತ್ಯ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಮಾಡುವ ಆಕ್ರಮ ವ್ಯವಹಾರಗಳನ್ನು ತಡೆಗಟ್ಟುವಲ್ಲಿ ಈ ರೀತಿಯ ಕ್ರಮ ಜರುಗಿಸುವುದು ಪರಿಶ್ರಮದಿಂದ ಓದಿದ ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಟ್ಟಂತೆಯೇ ಎಂದು ನನ್ನ ಭಾವನೆ.

ಪರೀಕ್ಷೆಯಲ್ಲಿ ನಕಲು ಮಾಡುವ ವಿದ್ಯಾರ್ಥಿಗಳನ್ನೇಕರನ್ನು ಡಿಬಾರು ಮಾಡಲಾಗಿದೆ. ವಿಚಕ್ಷಣ ದಳದ ಕೈಯಲ್ಲಿ ಸಂಶಯಾತ್ಮಕವಾಗಿ ಸಿಕ್ಕಿಬಿದ್ದ ನೂರಾರು ವಿದ್ಯಾರ್ಥಿಗಳ ಕೈಬರಹವನ್ನು ಪರೀಕ್ಷಿಸಿದ ನಂತರ ಅವರು ನಕಲು ಮಾಡಿಲ್ಲವೆಂಬುದು ಸಾಬೀತಾಗಿದೆ. ನಕಲು ಮಾಡಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗಿದ್ದರೂ ಇಂತಹ ಸಾವಿರಾರು ವಿದ್ಯಾರ್ಥಿಗಳಿಗೆ ಮುಂಬರುವ ಪರೀಕ್ಷೆಗೆ ಹಾಜರಾಗಲು ಈವರೆಗೆ ಪಿ.ಯು.ಸಿ. ಮಂಡಲಿ ಆದೇಶ ನೀಡಿಲ್ಲ. ಪರೀಕ್ಷೆಗೆ ಕುಳಿತುಕೊಳ್ಳಲು ಫಾರ್ಮ್ ತುಂಬಲು ಅವಧಿ ಈಗಾಗಲೇ ಮುಗಿದಿದೆ. ನಿರ್ದೋಷಿ ವಿದ್ಯಾರ್ಥಿಗಳು ಪಿ.ಯು.ಸಿ ಮಂಡಲಿಯಿಂದ ಈವರೆಗೂ ಸಂಬಂಧಿಸಿದ ಶಾಲಾಕಾಲೇಜುಗಳಿಗೆ ತಮ್ಮ ಕುರಿತು ಯಾವುದೇ ಆದೇಶ ಬಾರದಿರುವುದನ್ನು ಕಂಡು ಅತ್ಯಂತ ಹತಾಶರಾಗಿದ್ದಾರೆ. ಪಿ.ಯು.ಸಿ.ಮಂಡಲಿಯು ಈ ಅಕ್ಷಮ್ಯ ವಿಳಂಬದಿಂದಾಗಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಹಾಳಾಗುವುದಲ್ಲದೆ ವಿಷಯ ಇಷ್ಟು ಗಂಭೀರವಾಗಿದ್ದರೂ ಪಿ.ಯು.ಸಿ ಮಂಡಲಿ ನಿರ್ದೋಷಿ ವಿದ್ಯಾರ್ಥಿಗಳ ಜೀವನದ ಜತೆ ಚಲ್ಲಾಟ ಆಡುತ್ತಿರುವುದು ಅತ್ಯಂತ ಖಂಡನೀಯ. ಅವಧಿ ಮುಂಚಿಲ್ಲ. ಈಗಲಾದರೂ ಪಿ.ಯು.ಸಿ.ಮಂಡಲಿ ಆ ಕೆಲಸ ಮಾಡಬೇಕು. ಈ ಗಂಭೀರದ ವಿಷಯದಲ್ಲಿ ವಿಳಂಬ ಮಾಡಿರುವ ಪಿ.ಯು.ಸಿ.ಮಂಡಲಿಯ ಅಧಿಕಾರ ವಿರೋಧ ಉಗ್ರ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಶಿಕ್ಷಣ ಸಚಿವರನ್ನು ಆಗ್ರಹ ಪೂರ್ವಕವಾಗಿ ಕೇಳಿಕೊಂಡು ಅವರ ಗಮನ ಸೆಳೆಯಬಯಸುತ್ತೇನೆ.

ಉಪಸಭಾಧ್ಯಕ್ಷರು.—ಇದು ಸಭೆಯ ಗಮನಕ್ಕೆ ಬಂದಿದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ—ಇದು ಮೊದಲನೆಯ ಸಲ ಅಲ್ಲ. ಈ ರೀತಿ ಅನೇಕ ಸಲ ಆಗಿದೆ.

ಶ್ರೀ. ಜೆ.ಪರಾಜ ಆಳ್ವ.—ಸಂಬಂಧಪಟ್ಟ ವಿವರಗಳನ್ನು ತಿಳಿಸಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯೋಚನೆ ಮಾಡಿ ಮಾಡಿ ನಾನು ಹೇಳಬೇಕೋ ಅವರು ಹೇಳಬೇಕೋ ಎಂದು ಯಾರೂ ಕೂಡ ಇದರ ಕಡೆ ಗಮನ ಕೊಡುತ್ತಿಲ್ಲ. ಅಧ್ಯಕ್ಷರೇ, ಈ ಪಿಪಿಲಿಕನ್ನು ಏತಕ್ಕೆ ತೆಗೆದುಕೊಳ್ಳುತ್ತೀರಿ ? ಯು ಕ್ಲೋಸ್ ಇಟ್. ಈ ರೂಲ್ಸ್‌ನ್ನು ತೆಗೆದು ಹಾಕಿಬಿಡಿ.

ಶ್ರೀ ಬಿ. ರಾಚಯ್ಯ.—ಅವರು ಏನು ಹೇಳಿದ್ದಾರೆ. ಅದನ್ನು ಮಂತ್ರಿಗಳ ಗಮನಕ್ಕೆ ತರುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮ್ಮ ಕಡೆ ಏನೋ ಬಂದಿರಬಹುದು. ನೋಡುತ್ತಿದ್ದೀರಿ. ಬೇರೆ ಯಾರೂ ಇದರ ಕಡೆ ಗಮನ ಹರಿಸುವುದಿಲ್ಲ. ಇದರ ಬಗ್ಗೆ ಯೋಚನೆಯನ್ನೇ ಮಾಡುತ್ತಿಲ್ಲ. ಇದು ಒಂದೇ ಸಲ ಅಲ್ಲ. ೪-೫ ಸಲ ಈ ರೀತಿಯಾಗಿ ಆಗಿದೆ.